**O.S. No. 427/2014**
**ಪಿ..ಡಬ್ಲ್ಯು–01**

**<u>ಸಾಕ್ಷಿಯನ್ನು ದಿನಾಂಕಃ 10.07.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮಧ್ಯಕಾಲೀನ ಅರ್ಜಿ ಸಂಖ್ಯೆ 1/2023 ಮತ್ತು 2/2023 ರ ಆದೇಶದ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎಸ್.ಕೆ.ಜಿ. ವಕೀಲರಿಂದಃ</u>**

ಸ.ನಂ. 389 ಕ್ಕೆ ಸಂಬಂಧಿಸಿದ 02 ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ನಿ.ಪಿ.–20 ಮತ್ತು ನಿ.ಪಿ.–21 ಎಂದು ಗುರುತಿಸಲಾಯಿತು.

ಸ.ನಂ. 655 ಕ್ಕೆ ಸಂಬಂಧಿಸಿದ 04 ಪುಟಗಳುಳ್ಳ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.–22 ಎಂದು ಗುರುತಿಸಲಾಯಿತು.

ಸ.ನಂ. 659 ಕ್ಕೆ ಸಂಬಂಧಿಸಿದ 01 ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.–23 ಎಂದು ಗುರುತಿಸಲಾಯಿತು.

01 ಮಂಜೂರಾತಿ ಪತ್ರದ ಧೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.–24 ಎಂದು ಗುರುತಿಸಲಾಯಿತು.

ಹೆಚ್.ಡಿ.ಕೋಟೆ ತಹಸೀಲ್ದಾರ್ ರವರು ದಿನಾಂಕಃ 03.06.1987 ರಂದು LNDH /158/1974/1975 ಕ್ಕೆ ಸಂಬಂಧಿಸಿದಂತೆ ಸ್ಥಳ ತನಿಖೆ ಮಾಡಿ ಮಹಜರ್ ನೊಂದಿಗೆ ವರದಿ ಸಲ್ಲಿಸಲು ರಾಜಸ್ವ ನಿರೀಕ್ಷಕರಿಗೆ ನೀಡಿದ ಜ್ಞಾಪನಾ ಪತ್ರದ ಧೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.–25 ಎಂದು ಗುರುತಿಸಲಾಯಿತು.

01 ಸರ್ವೆ ನಕ್ಷೆಯ ಧೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.–26 ಎಂದು ಗುರುತಿಸಲಾಯಿತು.

ದಿನಾಂಕಃ 21.10.1974 ಮತ್ತು ದಿನಾಂಕಃ 31.10.1974 ರ 07 ಹಾಳೆಗಳುಳ್ಳ 02 ಅಧಿಕೃತ ಜ್ಞಾಪನ ಪತ್ರಗಳ ಧೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.–27 ಮತ್ತು ನಿ.ಪಿ.–28 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲು:</u> ಮಾನ್ಯ ಪ್ರತಿವಾದಿಗಳ ಪರ ವಕೀಲರು ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**